ಶ್ರೀ ಎನ್. ಎಂ. ಅಡ್ಯಂತಾಯ — ಮಾನ್ಯ ಅಧ್ಯಕ್ಷರೇ ಆಯೋಗದ ವರದಿಯ ಪ್ರಕಾರ ಮಂತ್ರಿಗಳು ತಪ್ಪಿತಸ್ಥರಾಗುತ್ತಾರೆ. ವರದಿಯಲ್ಲಿ ಡೈರೆಕ್ಟ್ ಆಗಿ ಹೇಳಿದ್ದಾರೆ. ಅಂತಹ ಮಂತ್ರಿಗಳನ್ನೇ ತಾವು ಇನ್ನೂ ಮಂತ್ರಿಗಳನ್ನಾಗಿ ಇಟ್ಟುಕೊಂಡಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ. — ಮಾನ್ಯ ಅಧ್ಯಕ್ಷರೇ, ಅಂತಹ ಯಾವುದೇ ಒಬ್ಬ ಮಂತ್ರಿಯನ್ನು ನನ್ನ ಮಂತ್ರಿ ಮಂಡಲದಲ್ಲಿ ಇಟ್ಟುಕೊಂಡಿಲ್ಲ. ಅಂದರೆ ಆಯೋಗದ ವರದಿಯಲ್ಲಿ ಆರೋಪವಿರುವಂತಹವರು ಯಾರೂ ಇಲ್ಲ.

ಶ್ರೀ ಎನ್. ಎಂ. ಅಡ್ಯಂತಾಯ. — ನ್ಯಾಯಮೂರ್ತಿ ವೆಂಕಟಸ್ವಾಮಿ ಆಯೋಗವನ್ನು ನೀವೇ ನೇಮಕ ಮಾಡಿದವರು. ಅವರು ಕೊಟ್ಟ ರಿಪೋರ್ಟ್ ಪ್ರಕಾರ ಹೊರ ರಾಜ್ಯಗಳಿಗೆ ಅಕ್ಕಿಯನ್ನು, ಭತ್ತ ಮಂತ್ತು ನುಚ್ಚನ್ನು ಸಾಗಿಸುವ ವಿಷಯದಲ್ಲಿ ಅಕ್ರಮವಾಗಿರುವುದಕ್ಕೆ, ಸಂಬಂಧಪಟ್ಟ ಮಂತ್ರಿಯವರೇ ಜವಾಬ್ದಾರರು ಎಂದು ಹೇಳಿದ್ದಾರೆ. ಅವರ ಮೇಲೆ ಇನ್ನೂ ಆಕ್ಷನ್ ಏಕೆ ತೆಗೆದುಕೊಂಡಿಲ್ಲ? ಬ್ಯಾಡಗಿ ಕಮಿಷನಲ್ಲಿ ತಪ್ಪಿತಸ್ಥರೆಂದು ಹೇಳಲಾದ ಕಾನ್ಸ್‌ಟೇಬಲ್‌ಗಳ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಡಿಸ್‌ಮಿಸ್ ಮಾಡಿದ್ದೀರಿ. ಆದರೆ, ಸಚಿವರ ಮೇಲೆ ಯಾವ ಕ್ರಮವನ್ನೂ ತೆಗೆದು ಕೊಳ್ಳಲಿಲ್ಲ.

ಅಧ್ಯಕ್ಷರು. — ನೀವು ಆಗಲೇ ಪ್ರಶ್ನೆ ಕೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ. — ಒಟ್ಟು ೧೧ ಕಮಿಷನ್‌ಗಳ ರಿಪೋರ್ಟ್ ಬಂದಿವೆ.

ಅಧ್ಯಕ್ಷರು. — ಇದರ ಬಗ್ಗೆ ಡಿಸ್ಕಷನ್ ಮಾಡಬೇಕಾದರೆ, ನೋಟೀಸ್ ಕೊಡಿ. ಈಗ ಮಾನ್ಯ ಜಮಖಂಡಿಯವರು ತಮ್ಮ ಪ್ರಶ್ನೆ ಕೇಳಿ.

ಮುಧೋಳದಲ್ಲಿ ಸ್ಮಾರಕ ಭವನದ ನಿರ್ಮಾಣ

೫೩೭. **ಶ್ರೀ ಬಿ.ಜಿ. ಜಮಖಂಡಿ** (ಮುಧೋಳ). — ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳದಲ್ಲಿ ಕವಿ ಚಕ್ರವರ್ತಿ ರನ್ನನ ಸ್ಮಾರಕ ಭವನ ನಿರ್ಮಿಸುವ ಬಗ್ಗೆ ಸರ್ಕಾರದವರು ಯೋಚಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ, ಸ್ಮಾರಕ ಭವನವನ್ನು ಯಾವಾಗ ನಿರ್ಮಿಸಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು). —

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ ಜಿ. ಜಮಖಂಡಿ. — ಮಾನ್ಯ ಅಧ್ಯಕ್ಷರೇ, ಮುಧೋಳ ತಾಲ್ಲೂಕಿನಲ್ಲಿ ಹುಟ್ಟಿದ ಕವಿ ರನ್ನನು ಗದಾಯುದ್ಧ ಎಂಬ ಮಹಾ ಕಾವ್ಯವನ್ನು ರಚಿಸಿದವನು. ಇಂಥ ದೊಡ್ಡ ಕವಿ ರನ್ನನ ಸ್ಮಾರಕವನ್ನು ನಿರ್ಮಿಸುವ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿಲ್ಲವೆಂದರೆ ಬಹಳ ಖೇದ ಎನಿಸುತ್ತದೆ. ಕವಿ ರನ್ನನ ಸ್ಮಾರಕವನ್ನು ನಿರ್ಮಾಣ ಮಾಡುವ ಬಗ್ಗೆ ನಮ್ಮ ತಾಲ್ಲೂಕಿನಲ್ಲಿರುವ ಹಲವಾರು ಸಂಘ ಸಂಸ್ಥೆಗಳಲ್ಲಿ ನಾನು ಮಾತನಾಡಿದ್ದೇನೆ ಈ ಸ್ಮಾರಕವನ್ನು ನಿರ್ಮಾಣ ಮಾಡುವುದಕ್ಕೆ ಪಬ್ಲಿಕ್ಸ್ ಹಣವನ್ನು ಕಾಂಟ್ರಿಬ್ಯೂಟ್ ಮಾಡಲಿಕ್ಕೆ ತಯಾರಿದ್ದಾರೆ. ಚನ್ನಗಿರಿ ತಾಲ್ಲೂಕಿನಲ್ಲಿ ಶಿವಾಜಿ ಮಹಾರಾಜನ ತಂದೆ ಷಹಾಜಿಯ ಸ್ಮಾರಕವನ್ನು ಕಟ್ಟುತ್ತಿರುವುದು ಎಲ್ಲರಿಗೂ ಗೊತ್ತಿದೆ. ಕರ್ನಾಟಕದಲ್ಲೇ ಹುಟ್ಟಿ ಬೆಳೆದು ಕನ್ನಡ ನಾಡಿಗೆ ಸೇವೆ ಸಲ್ಲಿಸಿರುವ ಮಹಾ ಕವಿ ರನ್ನನ ಸ್ಮಾರಕವನ್ನು ಕಟ್ಟಲಿಕ್ಕೆ ಸರ್ಕಾರ ಸಹಾಯ ಮಾಡಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಕವಿ ರನ್ನನ ನೆನಪಿಗಾಗಿ ಸ್ಮಾರಕವನ್ನು ಭವನ ನಿರ್ಮಿಸುವ ಬಗ್ಗೆ ಯೋಚಿಸಿದ್ದಾರೆಯೇ ಎಂದು ಕೇಳಿದ್ದಕ್ಕೆ ನಾನು ಇಲ್ಲವೆಂದು ಹೇಳಿದ್ದೇನೆ. ಸ್ಥಾನಿಕ ಜನರು ಸ್ಮಾರಕವನ್ನು ಕಟ್ಟಬೇಕೆಂದು ಇಚ್ಛಿಸಿ ಸಾರ್ವಜನಿಕರು ಹಣವನ್ನು ಕೊಟ್ಟು ಸಹಕರಿಸುವುದಾದರೆ ರನ್ನನ ಸ್ಮಾರಕವನ್ನು ಮಾಡುವುದಕ್ಕೆ ಯೋಜನೆಯನ್ನು ತಯಾರು ಮಾಡೋಣ. ರನ್ನನು ಒಳ್ಳೆಯ ಕವಿ. ಕರ್ನಾಟಕ ಸಾಹಿತ್ಯ ಇತಿಹಾಸದಲ್ಲಿ ಅವನಿಗೆ ವಿಶೇಷವಾದಂಥ ಸ್ಥಾನ ಇದೆ. ಸೂಕ್ತವಾದಂಥ ರೀತಿಯಲ್ಲಿ ಸ್ಥಾನಿಕ ಜನರ ಸಲಹೆಯನ್ನು ಕೇಳಿ ಸ್ಮಾರಕದ ಯೋಜನೆಯನ್ನು ನಾವು ಸಿದ್ಧ ಮಾಡುತ್ತೇವೆ.

ಕಲಘಟಗಿ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ತೆರೆಯುವುದು.

೫೦೪. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿಯಲ್ಲಿ ೩೦ ಹಾಸಿಗೆಯುಳ್ಳ ಒಂದು ಆಸ್ಪತ್ರೆಯನ್ನು ಪ್ರಾರಂಭಿಸುವ ವಿಚಾರ ಸರ್ಕಾರದವರಲ್ಲಿ ಇದೆಯೇ ?

ಆ) ಕಲಘಟಗಿ ಕ್ಷೇತ್ರದ

೧) ಸುರಶೆಟ್ಟಿಕೊಪ್ಪ (ಕಲಘಟಗಿ ತಾಲ್ಲೂಕು)

೨) ಮುತ್ತಗಿ (ಕಲಘಟಗಿ ತಾಲ್ಲೂಕು)

೩) ಕುರಡೀಕೇರಿ (ಹುಬ್ಬಳ್ಳಿ ತಾಲ್ಲೂಕು)

೪) ಮಂಟಾರಣ (ಹುಬ್ಬಳ್ಳಿ ತಾಲ್ಲೂಕು)

ಈ ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು).—

ಅ) ಇದೆ.

ಆ) ಇದನ್ನು ಪರಿಶೀಲಿಸಲಾಗುವುದು.

ಶ್ರೀ ಪಿ. ಸಿ. ಸಿದ್ದನಗೌಡ.—ಘನಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ 'ಇದೆ' ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಯಾವಾಗ ಮಾಡುತ್ತಾರೆಂದು ಸಚಿವರು ಹೇಳಬೇಕು. ಇನ್ನು ಎರಡನೆಯ ಪ್ರಶ್ನೆಗೆ, ನಾನು ಹೇಳುವುದಾದರೆ, ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ರೆಕಮೆಂಡೇಷನ್ ಮಾಡಿ ಕಳುಹಿಸಿದ್ದಾರೆ. ಆದ್ದರಿಂದ ಅದನ್ನೂ ಯಾವಾಗ ಮಾಡುತ್ತಾರೆಂದು ಸಚಿವರು ಹೇಳಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಜನರೇಟರ್ ಕೊಂಡುಕೊಳ್ಳುವ ವಿಚಾರದಲ್ಲಿ ಟೆಂಡರ್‌ನ್ನು ಕರೆದಿದೆ. ಈ ಕ್ರಮಗಳೆಲ್ಲಾ ಮುಂಗಡ ಪತ್ರದ ಮೇಲೆ.....

ಶ್ರೀ ಪಿ. ಸಿ. ಸಿದ್ದನಗೌಡ.—ನಾನು ಕೇಳಿರುವುದು ಜನರೇಟರ್ ಬಗ್ಗೆ ಅಲ್ಲ. ಕಲಘಟಗಿ ತಾಲ್ಲೂಕಿನಲ್ಲಿ ೩೦ ಹಾಸಿಗೆಗಳುಳ್ಳ ಆಸ್ಪತ್ರೆ ವಿಷಯವಾಗಿ ಕೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಸಿಗೆಗಳಿಗೂ ಜನರೇಟರುಗಳಿಗೂ ಏನೂ ವ್ಯತ್ಯಾಸ ಇಲ್ಲವೇ ?

ಅಧ್ಯಕ್ಷರು.—ನೀವು ಮಂತ್ರಿಗಳಾಗಿದ್ದಾಗ ಈ ತರಹ ಆಗಿರಲಿಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನಗೆ ಇಷ್ಟೊಂದು ಕನ್‌ಫ್ಯೂಷನ್ ಆಗಿರಲಿಲ್ಲ. ಒಬ್ಬರಿಗೇ ಹೆಲ್ತ್ ಮತ್ತು ಎಕ್ಸೈಸ್ ಖಾತೆ ಕೊಟ್ಟರೆ ಹೀಗೆ ಆಗುವುದು.